ಉಪಾಧ್ಯಕ್ಷರು.—ಮಾನ್ಯ ರಾಣಿಯವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಸಮಯ ಕೇಳಿದ್ದಾರೆ.

ಶ್ರೀ ಪ್ರಭಾಕರ ಎಸ್. ರಾಣಿ.—ಈ ಅಧಿವೇಶನ ಮುಗಿಯುವುದರಲ್ಲಿಯೆ ಉತ್ತರ ಬರುತ್ತದೆಯೇ ?

ಉಪಾಧ್ಯಕ್ಷರು.—ಬರುತ್ತದೆ.

ತಹಸೀಲ್ದಾರರುಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸುವುದು

೫೦೪ (೧೭೮೫) ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಸರ್ಕಾರದ ಸಚಿವ ಸಂಪುಟವು ದಿನಾಂಕ ೨೩-೧೦-೧೯೫೭ರಂದು ನಡೆಸಿದ ಸಚಿವ ಸಂಪುಟ ಸಭೆಯಲ್ಲಿ ನಡವಳಿಕೆ ಸಂಖ್ಯೆ ಸಿ ೨೩೩-೫೭-೫೮ರಲ್ಲಿ ತಹಶೀಲ್ದಾರರನ್ನು ತಾಲ್ಲೂಕಿನ ಮುಖ್ಯಸ್ಥ ಎಂದು ಘೋಷಿಸಿರುವ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆ ಇದೆಯೇ ?

ಆ) ಒಂದು ದಶಕದ ಹಿಂದೆ ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಅನೇಕ ಹುದ್ದೆಗಳು ತಹಶೀಲ್ದಾರರ ಹುದ್ದೆಗೆ ಸರಿಸಮಾನವಾದ್ದು ನಂತರ ಆ ಹುದ್ದೆಯನ್ನು ವೃಂದ 'ಎ' ಕಿರಿಯ ಶ್ರೇಣಿಯ ಹುದ್ದೆಗೆ ಪದೋನ್ನತಿಗೊಳಿಸಿರುವುದು ನಿಜವೇ ?

ಇ) ತಹಶೀಲ್ದಾರರು ಈಗಲೂ ತಾಲ್ಲೂಕು ಮಟ್ಟದ ಅನೇಕ ಸಮಿತಿಗಳಿಗೆ ಅಧ್ಯಕ್ಷರಾಗಿ ಅಥವಾ ಸಮನ್ವಯಾಧಿಕಾರಿಯಾಗಿ ಈಗಲೂ ಕೆಲಸ ನಿರ್ವಹಿಸುತ್ತಿರುವುದು ನಿಜವೇ ?

ಈ) ತಾಲ್ಲೂಕು ಮಟ್ಟದ ಅನೇಕ ಹುದ್ದೆಗಳು ವೃಂದ 'ಎ' ಶ್ರೇಣಿಗೆ ಪದೋನ್ನತಿ ಹೊಂದಿದ್ದು ತಹಶೀಲ್ದಾರರ ಹುದ್ದೆಯು ವೃಂದ 'ಬಿ' ಶ್ರೇಣಿಯಲ್ಲಿಯೂ ಮುಂದುವರಿದಿದ್ದು ಇದರಿಂದ ತಾಲ್ಲೂಕಿನ ಮುಖ್ಯಸ್ಥರಾದ ತಹಶೀಲ್ದಾರರ ಕಾರ್ಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವುದಿಲ್ಲವೇ. ?

ಉ) ಕರ್ನಾಟಕ ವಿಧಾನಮಂಡಲದ ಅಂದಾಜು ಸಮಿತಿಯು ದಿ: ೨೬-೩-೧೯೮೭ರಂದು ನೀಡಿದ ವರದಿಯಲ್ಲಿ ತಹಶೀಲ್ದಾರರ ಹುದ್ದೆಯನ್ನು ವೃಂದ 'ಎ' ಕಿರಿಯ ಶ್ರೇಣಿಯ ಹುದ್ದೆಗೆ ಪದೋನ್ನತಿಗೊಳಿಸುವ ಬಗ್ಗೆ ಶಿಫಾರಸ್ಸು ಮಾಡಿರುವ ವಿಚಾರ ನಿಜವೇ?

ಊ) ಹಾಗಿದ್ದಲ್ಲಿ ತಹಶೀಲ್ದಾರರ ಹುದ್ದೆಯನ್ನು ವೃದ್ದ 'ಎ' ಕಿರಿಯ ಶ್ರೇಣಿಗೆ ಪದೋನ್ನತಿಗೊಳಿಸಲು ಸರ್ಕಾರಕ್ಕೆ ಯಾವ ಅಡಚಣೆ ಇದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಹೌದು.

ಆ) ಹೌದು.

ಇ) ಹೌದು.

ಈ) ಇಲ್ಲ.

ಉ) ಹೌದು.

ಊ) ತಹಶೀಲ್ದಾರರ ಹುದ್ದೆಯನ್ನು ವೃಂದ 'ಎ' ಕಿರಿಯ ಶ್ರೇಣಿಗೆ ಪದೋನ್ನತಿಗೊಳಿಸುವ ವಿಚಾರ ಇಲಾಖೆಯ ಇತರ ಹುದ್ದೆಗಳ ಮೇಲೆ ಹಾಗೂ ಇತರ ಇಲಾಖೆಗಳ ಮೇಲೆ ಪರಿಣಾಮ ಬೀರುವುದರಿಂದ ಮತ್ತು ಹೆಚ್ಚಿನ ಹಣಕಾಸಿನ ಹೊರೆಯು ಬೀಳುವುದರಿಂದ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಪ್ರಶ್ನೆ ಈ ಸದನದಲ್ಲಿ ೨ನೇ ಬಾರಿಗೆ ಬರುತ್ತಿದೆ. ಮಂತ್ರಿಗಳ ಮನಸ್ಸು ಏನೂ ಎಂದು ನನಗೆ ಗೊತ್ತಾಗಿದೆ. ಆದ್ದರಿಂದ ಉಪ ಪ್ರಶ್ನೆ ಕೇಳಬೇಕೋ ಬೇಡವೋ

ಎಂದು ಆಲೋಚನೆ ಮಾಡುತ್ತಿದ್ದೇನೆ. ನಿನೇ ಭಾರಿಗೆ ನೀವು ಹಾಕಿದ್ದರಿಂದ ನಾನು ಕೇಳಬೇಕಾಗಿದೆ ಅಷ್ಟೆ. ನಾನು ಕಂದಾಯ ಇಲಾಖೆ ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುತ್ತಾ, ನಿಮ್ಮ ಆಡಳಿತಾತ್ಮಕ ವ್ಯವಸ್ಥೆ ಬಗ್ಗೆ ಸುಧೀರ್ಘವಾಗಿ ಕೇಳಿದ್ದೆ. ವ್ಯವಸ್ಥೆಗೆ ಗೌರವ ಬರಬೇಕೆಂದರೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರಿ ಯಾವರೀತಿ ಇದೆಯೋ, ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೂ ಕೂಡ ಅದೇರೀತಿ ಅಧಿಕಾರ ಇರಬೇಕು. ಇಲ್ಲದಿದ್ದರೆ ಬೇರೆ ಒಂದು ಡಿಸೈಡ್ ಮಾಡಿ. ಏಕೆಂದರೆ ಮ್ಯಾಜಿಸ್ಟೀರಿಯಲ್ ಪವರ್ ಇರತಕ್ಕಂಥಾದ್ದು. ತಾಲ್ಲೂಕುಮಟ್ಟದಲ್ಲಿ ತಹಶೀಲ್ದಾರ್‌ರಿಗೆ ಮಾತ್ರ. ಈ ಹುದ್ದೆಯನ್ನು ಏರಿಸದೆ, ಇವರ ಮೇಲಿರತಕ್ಕ ಹುದ್ದೆಯವರನ್ನು ಜೊತೆಯಲ್ಲಿ ಕೂಡಿಸಿಕೊಂಡು ಈತನನ್ನು ಜವಾಬ್ದಾರಿಯನ್ನು ನಿರ್ವಹಿಸು ಅಂದರೆ, ಮಾನಸಿಕವಾಗಿ ತೊಂದರೆಯಾಗುತ್ತದೆ. ಮತ್ತೆ ಶಾಸನಬದ್ಧವಾಗಿ ಕೂಡ ಕೆಲಸ ಮಾಡುವುದು ಕಠಿಣವಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ? ಬಂದಿದ್ದರೆ. ಈ ಹುದ್ದೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂಥ ಮಾತಿಗೆ. ಈ ಮೊದಲೇ ಈ ಸದನದಲ್ಲಿ ಉತ್ತರ ಕೊಡುವಾಗ ಉತ್ತರಿಸಿದ್ದೇನೆ. ನಿಜ, ತಹಶೀಲ್ದಾರ್ ಹುದ್ದೆ ತಾಲ್ಲೂಕು ಮಟ್ಟದಲ್ಲಿ ಬಹಳ ಮಹತ್ವದ್ದಾಗಿದೆ. ಎಲ್ಲವನ್ನೂ ಕ್ರೋಢೀಕರಿಸಿ, ಎಲ್ಲರನ್ನು ಕೂಡಿಸುವ ಹೊಣೆಗಾರಿಕೆಯನ್ನು ಅವರಿಗೆ ಒಪ್ಪಿಸಿದ್ದೇವೆ. ಆದರೆ ಮೇಲ್ದರ್ಜೆಗೇರಿಸುವುದರಿಂದ ಪಗಾರ ಹೆಚ್ಚಾಗುತ್ತದೆಯೇ ಹೊರತು, ಘನತೆ ಗೌರವ ಹೆಚ್ಚಿಗೆ ಬರುವುದಿಲ್ಲ. ತಹಶೀಲ್ದಾರ್ ಎಂಬ ಹೆಸರನ್ನು ತಾಲ್ಲೂಕು ಆಫೀಸರ್ ಎಂದು ಬದಲಾಯಿಸಿ ಮಾಡುವುದಾದ್ದು ಇದ್ದರೆ ಆ ಬಗ್ಗೆ ವಿಚಾರ ಮಾಡೋಣ. ಅಸಿಸ್ಟೆಂಟ್ ಕಮೀಷನರ್ ಕೆಳಗೆ ತಹಶೀಲ್ದಾರ್ ಇದ್ದಾರೆ. ಅವರನ್ನು ಏನೂಂತ ಕರೆಯಬೇಕು. ಬೇರೆ ಯಾವುದಾದರೂ ಕಮೀಷನರ್ ಎಂದು ಕರೆಯಬೇಕೇ ? ಇವರನ್ನು ಮೇಲ್ದರ್ಜೆಗೇರಿಸುವುದರಿಂದ ಪಗಾರ ಹೆಚ್ಚಾಗುತ್ತದೆಯೇ ಹೊರತು ಯಾವುದೇ ರೀತಿಯ ಉಪಯೋಗವಾಗುವುದಿಲ್ಲ. ಅನೇಕ ಕಡೆಗಳಲ್ಲಿ ಜಿಲ್ಲೆಗಳಾಗುತ್ತಿವೆ. ಅಸಿಸ್ಟೆಂಟ್ ಕಮೀಷನರ್ ಹುದ್ದೆಗಳು ನಿರರ್ಥಕ ಎಂದು ಹೇಳುವಂತವರು ಅನೇಕರು ಇದ್ದಾರೆ. ನಾಡ ಕಛೇರಿಗಳು ನಿರರ್ಥಕ ಎಂದು ಹೇಳುವವರು ಇದ್ದಾರೆ. ತಹಶೀಲ್ದಾರ್‌ರನ್ನು ೫೦ ಪರ್ಸೆಂಟ್ ಡೈರೆಕ್ಟ್ ರಿಕ್ರೂಟ್‌ಮೆಂಟ್, ೫೦ ಪರ್ಸೆಂಟ್ ಪ್ರೊಮೋಷನ್ ಮೇಲೆ ತೆಗೆದುಕೊಳ್ಳಲಾಗುತ್ತದೆ. ಶಿರಸ್ತೇದಾರ್‌ರರು ತಹಶೀಲ್ದಾರರಾಗುತ್ತಾರೆ, ತಹಶೀಲ್ದಾರ್‌ರು ಅಸಿಸ್ಟೆಂಟ್ ಕಮೀಷರ್ ಆಗುತ್ತಾರೆ. ಕೆಲವು ವರ್ಷ ಅಸಿಸ್ಟೆಂಟ್ ಕಮೀಷನರ್ ಆಗುವತನಕ ತಹಶೀಲ್ದಾರ್ ಆಗಿದ್ದು ಟ್ರೈನಿಂಗ್ ಪಡೆದರೆ, ಏನೂ ಮಹಾ ತಪ್ಪಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ ಆದರೂ ಮಾನ್ಯ ವಿರೋಧ ಪಕ್ಷದ ನಾಯಕರು ಈ ಮಾತನ್ನು ಹೇಳಿರುವುದರಿಂದ ಸೂಕ್ತವಾಗಿ ಇನ್ನೊಮ್ಮೆ ಪರಿಶೀಲನೆ ಮಾಡೋಣ.

ಶ್ರೀ ಡಿ. ಬಿ. ಚಂದ್ರೇಗೌಡ.—ಮುಖ್ಯವಾಗಿ ನಾವು ನಮ್ಮ ಸದನದ ಕಾರ್ಯಕಲಾಪಗಳು ನಡೆಯುವುದು ನಾವು ಹಾಕಿಕೊಂಡಿರತಕ್ಕಂಥ ನಿಯಮ, ಜೊತೆಗೆ ಮಾಡಿಕೊಂಡಿರತಕ್ಕಂಥ ವ್ಯವಸ್ಥೆಯಾಡಿಯಲ್ಲಿ, ನಮ್ಮ ವ್ಯವಸ್ಥೆಯಾಡಿಯಲ್ಲಿ ಅನೇಕ ಸಮಿತಿಗಳು ಇವೆ. ಅಂದಾಜು ಸಮಿತಿ ಇದೆ. ಈ ಸಮಿತಿ ರಿಪೋರ್ಟಿನಲ್ಲಿ ವರದಿ ಕೊಡುವಾಗ ಈ ವಿಚಾರಗಳೆನ್ನೆಲ್ಲಾ ಪರಿಶೀಲನೆ ಮಾಡಿ ಗಂಭೀರವಾಗಿ ಆಲೋಚನೆಯಿಂದಲೇ ಈ ಹುದ್ದೆಯನ್ನು 'ಎ' ಶ್ರೇಣಿಗೆ ಪದೋನ್ನತಿ ಮಾಡಬೇಕೆಂದು ವರದಿ ಕೊಟ್ಟಿದೆ. ಆದ್ದರಿಂದ ಕೇಸ್ ಏನಾಗುತ್ತದೆ. ಬಿಡುತ್ತದೆ ಎನ್ನುವ ಪ್ರಶ್ನೆ ಅಲ್ಲ. ಈಗ ಮಿನಿಸ್ಟರ್ ಆಫ್ ಸ್ಟೇಟ್ ಇದ್ದರೆ ಏನಾಗುತ್ತದೆ ಕ್ಯಾಬಿನೆಟ್ ಮಿನಿಸ್ಟರ್ ಇದ್ದರೆ ಏನಾಗುತ್ತದೆ. ಡೆಪ್ಯೂಟಿ ಮಿನಿಸ್ಟರ್ ಇದ್ದರೆ ಏನಾಗುತ್ತದೆ ಇದೆಲ್ಲಾ ನನಗೂ ತಿಳಿಯುತ್ತದೆ. ಆದರೆ ಸದನದ ಸಮಿತಿ ಒಂದು ವರದಿಯನ್ನು ಕೊಟ್ಟಿದೆ. ಅದಕ್ಕೆ ಗೌರವ ದೃಷ್ಟಿಯಿಂದಲಾದರೂ ಆಲೋಚನೆ ಮಾಡುವುದು ಬೇಡವೇ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ವರದಿಯ ಬಗ್ಗೆ ಮಾತನಾಡಿದಾಗ ನನಗೆ ಒಂದು ದೃಷ್ಟಿಯಿಂದ ನಗು ಬರುತ್ತದೆ. ಈಗ ಅನೇಕ ವರದಿಗಳು ಇವೆ. ಈ ಎಲ್ಲಾ ವರದಿಗಳನ್ನು ಜಾರಿಗೆ ತಂದು ವೇತನವನ್ನು ಕೊಡಲಿಕ್ಕೆ ಹೋದರೆ ಡವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಒಂದು ಪೈಸೆ ಸಿಕ್ಕುವುದಿಲ್ಲ. ಅದು ಅವರಿಗೂ ಗೊತ್ತಿದೆ ಆದರೆ, ನಾವು ಒಂದು ವರ್ಗವನ್ನು ಸಮಾಧಾನ ಮಾಡಲಿಕ್ಕೆ ಏನಾದರೂ ಹೊರಟರೆ, ಉಳಿದ ಎಲ್ಲಾ ವರ್ಗಗಳನ್ನು ನೆಲ ಕಚ್ಚಿಸಿದಂತೆ ಆಗುತ್ತದೆ, ಆ ದೃಷ್ಟಿಯಿಂದ ನಾವು ಆಲೋಚನೆ ಮಾಡಿ ಕೆಲವು ದಿವಸ ಕಾದು ನೋಡೋಣ.

ಶ್ರೀ ಎಸ್. ಹೆಚ್. ಕೌಜಲಗಿ.—ಇಪ್ಪತ್ತಿನ ದಿವಸ ತಾಲ್ಲೂಕಿನಲ್ಲಿರತಕ್ಕ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್, ಮೆಡಿಕಲ್ ಆಫೀಸರ್, ಅಸಿಸ್ಟೆಂಟ್ ಇಂಜಿನಿಯರ್, ಅಗ್ರಿಕಲ್ಚರ್

ಆಫೀಸರ್, ಇವರೆಲ್ಲರೂ 'ಎ' ಗ್ರೇಡ್‌ನಲ್ಲಿದ್ದಾರೆ. ಮೊದಲು ಇವರೂ ಸಹಾ 'ಬಿ' ಗ್ರೇಡ್‌ನಲ್ಲಿದ್ದರು ಮೊನ್ನೆ ಮೊನ್ನೆ, 'ಎ' ಗ್ರೇಡ್‌ಗೆ ಮಾಡಿದ್ದಾರೆ. ಮಿಟಿಂಗ್ ಕಂಡಕ್ಟ್ ಮಾಡುವ ಕಾಲಕ್ಕೆ ಇವೊತ್ತಿನ ದಿವಸ ತಹಶೀಲ್ದಾರ್ ಅವರು ಪ್ರಿಸೈಡ್ ಮಾಡುತ್ತಾರೆ. ಅವರ ಹಿಂಬದಿಯಲ್ಲಿ 'ಎ' ಗ್ರೇಡ್‌ನವರು ಕುಳಿತುಕೊಳ್ಳುತ್ತಾರೆ. ಆದ್ದರಿಂದ, ತಾಲ್ಲೂಕು ಅಧಿಕಾರಿಯನ್ನು 'ಎ' ಗ್ರೇಡ್ ಶ್ರೇಣಿಗೆ ಮಾಡುವುದು ಬಹಳ ಅವಶ್ಯಕತೆ ಇದೆ. ಅವರಿಗೆ ಗೆಜೆಟೆಡ್ ಆಫೀಸರ್ ಎಂದು ಮಾಡುವುದು ಬಹಳ ಅವಶ್ಯಕತೆ ಇದೆ, ಎಂದು ಮತ್ತೊಮ್ಮೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನನ್ನ ಅಭ್ಯಂತರ ಇಲ್ಲ, ನನ್ನ ಅಡಚಣೆಗಳು ಏನಿದೆ ಎಂದು ಹೇಳಿದೆ ಅವರ ಪಗಾರದಲ್ಲಿಯೇ ಹೆಚ್ಚಿಗೆ ಆಗುವುದಾದರೆ ಆಗಬಹುದು. ಒಬ್ಬ ಹೈಸ್ಕೂಲು ಟೀಚರ್ ಇರುತ್ತಾನೆ. ಅವರ ಪಗಾರ ಇವನಿಗಿಂತಲೂ ಹೆಚ್ಚು ಇರುತ್ತದೆ. ಯೂನಿವರ್ಸಿಟಿ ಗ್ರೇಡ್‌ನ್ನು ಮಾನ್ಯ ವಿದ್ಯಾಮಂತ್ರಿಗಳು ಈ ಕಾಲೇಜುಗಳಿಗೆ ಕೊಟ್ಟುಬಿಟ್ಟಿದ್ದಾರೆ. ಅವರಿಗೆ ನೋಡಿದರೆ ಐದಾರು ಸಾವಿರ ರೂಪಾಯಿ ಸಂಬಳ ಇದೆ. ಗವರ್ನರ್‌ಗಿಂತಲೂ ಹೆಚ್ಚು ಇದೆ. ಅವರಿಗೂ ಕೂಡ ನೀವು ಈಕ್ವಿವಲೇಟ್ ಮಾಡಬೇಕೆಂದು ಹೇಳಿದರೆ ಹೇಗೆ ಸಾಧ್ಯ? ಸರ್ಕಾರದ ಬೊಕ್ಕಸದ ಬಗ್ಗೆ ವಿಚಾರ ಮಾಡಿ ಮಾತನಾಡುವಾಗ ಯಾವರೀತಿಯಿಂದ ಸಾಧ್ಯ ಇದೆ ಹೇಳಬೇಕಾಗುತ್ತದೆ. ಎಲ್ಲಾ ತಹಶೀಲ್ದಾರ್ ಅಸಿಸ್ಟೆಂಟ್ ಕಮಿಷನರ್ ಎಲ್ಲಾ ಅಸಿಸ್ಟೆಂಟ್ ಕಮಿಷನರ್ ಡೆಪ್ಯೂಟಿ ಕಮಿಷನರ್ ಮಾಡಿ ಅಂದರೆ ಪಗಾರ ಯಾರದು ? ಬಡ ಬೋರೇಗೌಡನಿಂದ ಹಣ ಪಡೆದು ನಾವು ಮಾಡುವಾಗ ಅವನಿಗೆ ಕೊಡ ತಕ್ಕಂಥ ಸೌಕರ್ಯಗಳನ್ನು ಕೊಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ನಾವು ಇವರಿಗೆ ಸಮಾಧಾನ ಕೊಡಬೇಕು ಅಂದರೆ ಈಗಿನ ದೃಷ್ಟಿಯಿಂದ ನನ್ನ ಕಡೆಯಿಂದ ಸಾಧ್ಯವಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಣೆ ಆದಾಗ, ಅವರಿಗೆ ನಿಜವಾಗಿ ಕೊಡೋಣ. ಬೇಡ ಎಂದು ಹೇಳುವುದಿಲ್ಲ.

ನಿಪ್ಪಾಣಿ ಸಕ್ಕರೆ ಕಾರ್ಖಾನೆಯಲ್ಲಿನ ಕೆಲಸಗಾರರನ್ನು ಸಾಮೂಹಿಕವಾಗಿ ತೆಗೆದು ಹಾಕಿರುವ ಬಗ್ಗೆ

೪೦೫ (೧೫೭೮) ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಹಲ್ಸದನಾಥ ಕೋ–ಆಪರೇಟಿವ್ ಷುಗರ್ ಫ್ಯಾಕ್ಟರಿ ಲಿಮಿಟೆಡ್, ನಿಪ್ಪಾಣಿ. ಇಲ್ಲಿ ೬೦೦ ಮಂದಿ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ ಹೆಚ್. ಪಾಟೀಲ್ (ಕಾರ್ಮಿಕ ಸಚಿವರು).—

ಅ) ಹೌದು, ಸೀಸನ್ ಮುಗಿದ ನಂತರ ೪೫೯ ಮಂದಿ ಕೆಲಸಗಾರರನ್ನು ತೆಗೆದುಹಾಕಲಾಗಿದೆ.

ಆ) ಇದು ಸರ್ವೆಸಾಮಾನ್ಯ ವಿಧಾನವಾದ್ದರಿಂದ ಇದರ ಮೇಲೆ ಕ್ರಮ ಅಗತ್ಯವಿಲ್ಲ.

SRI SUBASH JOSHI (Nippni).—Hon'ble Madam, in the answer provided, 436 workers have been terminated as usual after the season and the answer to question No.2 is that since it is a usual procedure, no action is necessary. The usual procedure is that "first comeshould go last." and "last come should first go" This procedure has not been implemented. Therefore action is required by the Government.

SRI K. H. PATIL (Minister for Revenue and Labour).—Sir, it has come to the notice of the Government that only seasonal workers numbering about 436 have been terminited and not the regular workers, as usual which they are doing it every year. 156 from Engineering Section, 106 from Manufacturing Division,